ಪ್ರಾರಂಭಿಸಲಾಗಿರುವ ವಿದ್ಯಾರ್ಥಿನಿಲಯಗಳಿಗೆ, ಸಂಬಂಧಪಟ್ಟ ಜಿಲ್ಲಾ ಪರಿಷತ್‌ಗಳೇ ಅಗತ್ಯ ಸಿಬ್ಬಂದಿಯನ್ನು ಒದಗಿಸಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಬೇಕಾಗಿದೆ.

ಇ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಡ್ಕೋ ಯೋಜನೆಗಳು

350 (4437): ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1985ರಿಂದ 1989ರ ತನಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಡ್ಕೋ ಯೋಜನೆಯಲ್ಲಿ ಮಂಜೂರಾಗಿರುವ ಮನೆಗಳೆಷ್ಟು;

ಆ) ಇದರಲ್ಲಿ ಪೂರ್ತಿಯಾಗಿರುವ ಮನೆಗಳೆಷ್ಟು;

ಇ) ಹಣ ಪಾವತಿಯಾಗದೇ ಬಾಕಿ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು;

ಈ) ಈ ಮನೆಗಳನ್ನು ಪೂರ್ತಿಗೊಳಿಸುವರೇ, ಇನ್ನೂ ಪಾವತಿಯಾಗಬೇಕಾಗಿರುವ ಹಣವೆಷ್ಟು ? ಈ ಹಣ ಯಾವಾಗ ಪಾವತಿ ಮಾಡಲಾಗುವುದು ?

ಶ್ರೀ ಆರ್. ಗೋವಿನಾಥ ಪಾಂಡ್ಯಾ (ವಸತಿ ಸಚಿವರು)

ಅ ಮತ್ತು ಆ)

ವರ್ಷ	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಬಾಕಿ	
			ಪ್ರಗತಿಯಲ್ಲಿ	ಪ್ರಾರಂಭವಾಗದಿರುವ ಮನೆಗಳು
1985–86	2760	2760	–	–
1986–87	2696	2666	30	–
1987–88	2740	2596	124	20
1988–89	3612	2946	638	28
1989–90	2585	1535	834	216
ಒಟ್ಟು	14393	12503	1626	264

ಇ) 1890 ಮನೆಗಳು

ಈ) ಸಹಾಯಧನ – ರೂ.31.210 ಲಕ್ಷ
ಹುಡ್ಕೋ ಸಾಲ – ರೂ. 74.83 ಲಕ್ಷ

ಪ್ರಗತಿಯನ್ನಾಧರಿಸಿ ಹುಡ್ಕೋ ಸಂಸ್ಥೆಯು ಉಳಿದ ಸಾಲದ ಹಣವನ್ನು ಬಿಡುಗಡೆ ಮಾಡುತ್ತದೆ.

ಬೀಡಿ ಕಾರ್ಮಿಕರಿಗೆ ಮಾಗೋಡ ಗ್ರಾಮದ 100 ಎಕರೆ ಹಂಚಿಕೆ

355 (85): ಶ್ರೀ ಕೆ.ಜಿ. ಕೋಳಿವಾಡ (ರಾಣೆಬೆನ್ನೂರು):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೆಬೆನ್ನೂರು ನಗರದಲ್ಲಿ 2ಸಾವಿರ ಬೀಡಿ ಕಾರ್ಮಿಕರಿಗೆ ಮನೆ ಕಟ್ಟುವ ಸಲುವಾಗಿ ಆಶ್ರಯ ಯೋಜನೆಯಡಿ ನಿವೇಶನಗಳನ್ನು ರಾಣೆಬೆನ್ನೂರು ತಾಲ್ಲೂಕು ಮಾಗೋಡ ಗ್ರಾಮದಲ್ಲಿ 100 ಎಕರೆ ಹುಲ್ಲುಗಾವಲನ್ನು ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ?

ಆ) ನಿವೇಶನಗಳಿಗೆ ಹುಲ್ಲುಗಾವಲನ್ನು ಡಿಸ್‌ಅಸೈನ್ ಮಾಡುವ ಅಧಿಕಾರವು ಆಯಾ ಜಿಲ್ಲಾಧಿಕಾರಿಗಳಿಗೆ ಇದ್ದರೂ ಸಹಾ ವಿಳಂಬವಾಗಲು ಕಾರಣವೇನು ?

ಶ್ರೀ ಆರ್. ಗೋವಿನಾಥ ಸಾಂಡ್ರ (ವಸತಿ ಸಚಿವರು):-

ಅ) ಇಲ್ಲ. ಆದರ 100 ಎಕರೆ ಹುಲ್ಲುಗಾವಲನ್ನು ಡಿಸ್‌ಅಸೈನ್ ಮಾಡುವಂತೆ ಟಾಸ್ಕ್‌ಫೋರ್ಸ್ ಸಮಿತಿ ರಾಣೆಬೆನ್ನೂರು ಅವರ ಕೋರಿಕೆ ಧಾರವಾಡ ಜಿಲ್ಲಾಧಿಕಾರಿಗಳ ಮುಂದಿದೆ.

ಆ) ಈಗಾಗಲೇ 50 ಎಕರೆ ಭೂಮಿಯನ್ನು ಆಶ್ರಯ ಯೋಜನೆಗಾಗಿ ಜಿಲ್ಲಾಧಿಕಾರಿ, ಧಾರವಾಡ ಇವರ ಆದೇಶ ಸಂಖ್ಯೆ : ಎಲ್‌ಎಸ್‌ಡಿ ಸಿ.ಆರ್. 169:92-93, ದಿ:10-9-1992ರ ಪ್ರಕಾರ ಡಿಸ್‌ಅಸೈನ್ ಮಾಡಲಾಗಿದೆ. ಇದಲ್ಲದೆ 30 ಎಕರೆ ಭೂಮಿಯನ್ನು ಯುಟಿಪಿಯ ಸಿಬ್ಬಂದಿ ವಸೂಲಿಗಾಗಿ ಡಿಸ್‌ಅಸೈಡ್ ಮಾಡಲು ಬೆಳಗಾಂ ವಿಭಾಗಾಧಿಕಾರಿಗಳ ಮೂಲಕ 23-2-93ರಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಉಳಿದ ಹುಲ್ಲುಗಾವಲು ಜಾನುವಾರುಗಳ ಮೇವಿಗೆ ಅತ್ಯವಶ್ಯವಿದೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 12-3-93ರ ಲಿಖಿತ ಮೂಲಕ ಉತ್ತರಿಸುವ 18ನೇ ಪಟ್ಟಿಯಲ್ಲಿರುವ 62 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 1150, 1877, 1876, 1875, 1916, 1918, 1960, 1833, 1974, 1973, 1830, 1838, 1098, 1682, 174 ಮತ್ತು 83 ಎ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 46 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER:- Question Hour is over.

ಗುಬ್ಬಿ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಗಾರರಿಗೆ ನೀಡಿರುವ ನೆರವು

1104 (1613): ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆ ಬೆಳೆಯುವ ಜಮೀನಿನ ವಿಸ್ತೀರ್ಣವೆಷ್ಟು;

ಆ) ರೇಷ್ಮೆ ಹುಳು ಸಾಕಲು ಸಹಾಯಧನರೂಪದಲ್ಲಿ ತಟ್ಟೆ ಮತ್ತು ಚಂದ್ರಿಕೆಗಳನ್ನು ಕೊಡಲಾಗಿರುವ ಜನರ ಸಂಖ್ಯೆ ಎಷ್ಟು ?

(ಹೋಬಳಿವಾರು ಜಾತಿವಾರು ಪೂರ್ಣ ಹೆಸರಿನೊಂದಿಗೆ ವಿವರ ನೀಡುವುದು)

ಶ್ರೀ ಡಾ.ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):-

ಅ) 1017 29 ಎಕರೆಗಳಲ್ಲಿದೆ.

ಆ) ಪರಿಶಿಷ್ಟ ಜಾತಿಯವರಿಗೆ ಮಾತ್ರ ತಟ್ಟೆ ಮತ್ತು ಚಂದ್ರಿಕೆಗಳನ್ನು ಕೊಡಲಾಗುತ್ತಿದೆ. ಆದರಂತೆ 31 ಜನರಿಗೆ ಕೊಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.